ಪಿ. ಕನ್ನಡ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಹಾಳಾದ ಪಿ.ಡಬ್ಲ್ಯೂಡಿ ರಸ್ತೆಗಳು

2337 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಹಾಳಾದ ಪಿ.ಡಬ್ಲ್ಯೂ.ಡಿ. ರಸ್ತೆಗಳು, ರಾಜ್ಯ ಹೆದ್ದಾರಿ ರಸ್ತೆಗಳು ಯಾವುವು? ಆ ಬಗ್ಗೆ ಆದ ನಷ್ಟ ಎಷ್ಟು? ಹಾಗೂ ಇದನ್ನು ಸರಿಪಡಿಸಲು ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಬಿಡುಗಡೆ ಮಾಡಬೇಕಾಗಿರುವ ಬಾಕಿ ಹಣವೆಷ್ಟು?*

ಆ) *ಮಂಗಳೂರು ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳು ಕಾರ್ಪೊರೇಷನ್ ರಸ್ತೆಗಳಿಗೆ ರಾಜ್ಯ ಹೆದ್ದಾರಿಗಳು ಹಾಳಾಗಿರುವುದರಿಂದ ಆ ಬಗ್ಗೆ ಆಗಿರುವ ನಷ್ಟವೆಷ್ಟು? ಅದನ್ನು ದುರಸ್ಥಿಗೊಳಿಸಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಹಣ ಬಿಡುಗಡೆ ಇನ್ನೆಷ್ಟು ಆಗಬೇಕಾಗಿದೆ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ1998-99ನೇ ಸಾಲಿನ ಪ್ರಕೃತಿ ವಿಕೋಪದಿಂದ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಹಾಗೂ ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಸುಮಾರು 7 ರಾಜ್ಯ ಹೆದ್ದಾರಿಗಳು ಮತ್ತು 39 ಜಿಲ್ಲಾ ಮುಖ್ಯ ರಸ್ತೆಗಳು ಸುಮಾರು 141 ಚಾಚುಗಳಲ್ಲಿ ಹಾಳಾಗಿರುತ್ತದೆ ದುರಸ್ತಿಗೆ ಸುಮಾರು 120.00 ಲಕ್ಷ ರೂ.ಗಳನ್ನು ಅಂದಾಜಿಸಿದೆ. ಈವರೆಗೆ ಮಂಗಳೂರು ಜಿಲ್ಲಾಧಿಕಾರಿಯವರಿಂದ 9.00 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ.

ಆ) ಮಂಗಳೂರು ಕ್ಷೇತ್ರದಲ್ಲಿ ಕಾರ್ಪೊರೇಷನ್ ಪರಿಮಿತಿ ಒಳಗೆ ಹಾಳಾಗಿರುವ ರಸ್ತೆಗಳು ಒಟ್ಟು ಮೊತ್ತ 15.00 ಲಕ್ಷ ರೂ.ಗಳನ್ನು ಅಂದಾಜಿಸಿದೆ. ದುರಸ್ಥಿಗೆ ಇನ್ನೂ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ.

ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ 18.20 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆ 48.84 ಕಿ.ಮೀ. ಆಗಿದ್ದು ಇದಕ್ಕೆ ವಾರ್ಷಿಕ ನಿರ್ವಹಣೆ ಕ್ರಮವಾಗಿ 3.64 ಮತ್ತು 7.32 ಲಕ್ಷ ರೂ.ಗಳು.

ನಬಾರ್ಡ್ ಅನುದಾನದಲ್ಲಿ ರಾಜ್ಯದಲ್ಲಿ ಕಾಮಗಾರಿ ಕೆಲಸ

2338 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಬಾರ್ಡ್ ಅನುದಾನದಲ್ಲಿ ರಾಜ್ಯದಲ್ಲಿ ಈವರೆಗೆ ಆರ್.ಐ.ಡಿ.ಎಫ್.-2, ಆರ್.ಐ.ಡಿ.ಎಫ್-3, ಆರ್.ಐ.ಡಿ.ಎಫ್.-4ರಲ್ಲಿ ಮಂಜೂರಾದ ಪ್ರತಿ ತಾಲ್ಲೂಕುವಾರು ಕಾಮಗಾರಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಒಟ್ಟು ಅಂದಾಜು ಮೊತ್ತ ಎಷ್ಟು?*

ಆ) *ಮಂಜೂರಾದ ಕಾಮಗಾರಿಗಳಲ್ಲಿ ಪ್ರತಿ ತಾಲ್ಲೂಕುವಾರು ಆರ್.ಐ.ಡಿ.ಎಫ್.-2, ಆರ್.ಐ.ಡಿ.ಎಫ್.-3, ಆರ್.ಐ.ಡಿ.ಎಫ್-4ರಲ್ಲಿ ಕ್ರಮವಾಗಿ ಪೂರ್ಣವಾದ ಕಾಮಗಾರಿಗಳ ಸಂಖ್ಯೆ ಎಷ್ಟು? ಹಾಗೂ ಬಾಕಿಯಿರುವ ಕಾಮಗಾರಿಗಳ ಸಂಖ್ಯೆ ಎಷ್ಟು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಅನುಬಂಧ 'ಅ'ನಲ್ಲಿ ನೀಡಿದೆ. (ಪ್ರಶ್ನೆ ಸಂಖ್ಯೆ 2931ರಲ್ಲಿ ನೀಡಿದೆ).

ಆ) ಆರ್.ಐ.ಡಿ.ಎಫ್-2 ರಡಿಯಲ್ಲಿ ಈವರೆಗೆ 61 ಕಾಮಗಾರಿಗಳು ಪೂರ್ಣಗೊಂಡಿದ್ದು, ತಾಲ್ಲೂಕುವಾರು ಮಾಹಿತಿಯನ್ನು ಅನುಬಂದ 'ಆ'ನಲ್ಲಿ ನೀಡಿದೆ. ಆರ್.ಐ.ಡಿ.ಎಫ್.3 ಮತ್ತು 4 ರಡಿಯಾವುದೇ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ. ಬಾಕಿ ಕಾಮಗಾರಿಗಳನ್ನು ಸಂಖ್ಯೆಗಳನ್ನೂ ಅನುಬಂಧ 'ಅ'ನಲ್ಲಿ ನೀಡಿದೆ.

ದಿನಾಂಕ 3.11.1998ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಚಿಕ್ಕನಾಯಕನಹಳ್ಳಿ ಹಂದನಕೆರೆಗೆ ಪೋಲೀಸ್ ಠಾಣೆ

489 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕನಾಯಕನಹಳ್ಳಿಯ ಹಂದನಕೆರೆಗೆ ಒಂದು ಪೋಲೀಸ್ ಠಾಣೆ ಬೇಕೆಂದು ಅನೇಕ ವರ್ಷಗಳಿಂದ ಒತ್ತಡ ಮಾಡುತ್ತಿರುವುದು ಸರ್ಕಾರಕ್ಕೆ ತಿಳಿದಿಲ್ಲವೇ?*

ಆ) *ಹಾಗಿದ್ದಾಗ್ಯೂ ಅಲ್ಲಿ ಒಂದು ಪೋಲೀಸ್ ಠಾಣೆ ಮಾಡದಿರಲು ಕಾರಣವೇನು?*

ಇ) *ಈ ವರ್ಷವೇ ಆದ್ಯತೆಯ ಮೇರೆಗೆ ಅಲ್ಲಿ ಒಂದು ಪೋಲೀಸ್ ಠಾಣೆ ಆರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) 1997-98ರಲ್ಲಿ 11 ಪೋಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಿದಾಗ ಇದನ್ನು ಪರಿಶೀಲಿಸಲಾಗಿದ್ದಿತು. ಆದರೆ ಹಣಕಾಸಿನ ಕೊರತೆಯಿಂದಾಗಿ ಮಂಜೂರು ಮಾಡಲಾಗಲಿಲ್ಲ.

ಇ) ಪ್ರಸ್ತುತ ವರ್ಷದ ಹೊಸ ಠಾಣೆಗಳನ್ನು ತೆರೆಯುವ ಪ್ರಸ್ತಾವನೆಯೊಂದಿಗೆ ಹಂದನಕೆರೆ ಠಾಣೆಯ ಬಗೆಗೂ ಪುನಃ ಪರಿಗಣಿಸಲಾಗುವುದು.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಬ್-ಸ್ಟೇಷನ್‌ಗಳ ಸ್ಥಾಪನೆ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ

490 - ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕ್ರಮಬದ್ಧ ವಿದ್ಯುತ್ ಸರಬರಾಜಿಗಾಗಿ ಹೊಸ ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ಮತ್ತು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಸರ್ಕಾರವು ಸ್ಥಾಪಿಸಿದೆಯೇ?*